ಕೃಷ್ಣನ ಕೊಳಲನ್ನು ಕೇಳಿದ ಮತ್ತೊಬ್ಬಳು ಗೋಪಿ ಪ್ರಜ್ಞಾಹೀನಳಾಗಿ ನೆಲಕ್ಕೆ ಬೀಳುತ್ತಾಳೆ; //
ಇನ್ನೊಬ್ಬಳು ನೆಲದ ಮೇಲೆ ಬಿದ್ದು ಹೊರಳಾಡುತ್ತಾಳೆ, ಧಾರಾಕಾರ ಸುರಿಸುತ್ತಾ ಕಣ್ಣೀರು. /
ರಸ್‌ಖಾನನು ಹಾಡುತ್ತಾನೆ: ಅವರೆಲ್ಲರನ್ನೂ ಕೃಷ್ಣನು ಕೊಂದಿದ್ದಾನೆ;
ಅವನೊಬ್ಬ ಕಟುಕ, ನಾವೆಲ್ಲರೂ ಮನೆಯವರ ಎದುರು ನಗೆಪಾಟಲು. //
ಈಗ, ಇರುವ ಬಿದುರು ಮೆದೆಗಳೆಲ್ಲವನ್ನೂ ಕತ್ತರಿಸಬೇಕುಮತ್ತೊಮ್ಮೆ ಅವು ಚಿಗುರದಂತೆ;/
ಬಿದುರೇ ಇಲ್ಲದಿದ್ದಾಗ ಕೊಳಲೆಲ್ಲಿ? ಕೊಳಲಿಲ್ಲದಿದ್ದರೆ ಕೃಷ್ಣನ ಕರೆಯೆಲ್ಲಿ?//

5) ಮಾನುಸ್ ಹೋ ತೋ ವಹೀ ರಸ್ ಖಾನ್..

ಮಾನವನಾಗಿ ರಸ್ ಖಾನ್ ಮತ್ತೊಮ್ಮೆ ಹುಟ್ಟುವುದಿದ್ದರೆ, ಗೋಕುಲದಲ್ಲಿ ಗೋವಳನಾಗಿರಲಿ;/
ಪ್ರಾಣಿಯಾಗಿ ಹುಟ್ಟುವುದಿದ್ದರೆ? ನಂದನ ಗೋಮಾಳದಲ್ಲಿ ಹುಲ್ಲು ಮೇಯುವ
ಒಂದು ಹಸುವಾಗಿರಲಿ; //
ಕಲ್ಲಾಗುವುದಿದ್ದರೆ, ಇಂದ್ರನ ಬಿರುಗಾಳಿಯನ್ನು ತಡೆಯಲು ಕೊಡೆಯಂತೆ ಕೃಷ್ಣನೆತ್ತಿದ
(ಗೋವರ್ಧನ) ಗಿರಿಯಲ್ಲಿರಲಿ;/
ಪಕ್ಷಿಯಾಗಿ ಹುಟ್ಟುವುದಿದ್ದರೆ, ಯಮುನಾ ತೀರದ ಕದಂಬ ವೃಕ್ಷದ ಕೊಂಬೆಗಳಲ್ಲಿ ನೆಲೆಸಲಿ.//

(**Shyamdas, tr. The Poems of Rasakhan: Treasure House of Love, 2007** – ಈ ಕೃತಿಯಲ್ಲಿರುವ ರಸ್‌ಖಾನನ ಕವನಗಳ ಇಂಗ್ಲಿಷ್ ಅನುವಾದವನ್ನು ಆಧರಿಸಿ, ಕನ್ನಡಕ್ಕೆ ಅನುವಾದಿಸಿದ್ದೇನೆ.)

## ತಾಜ್ ಬೀಬಿ



ವೈಭವದ ಬದುಕು, ದೈಹಿಕ ಸುಖ–ಸಂತೋಷಗಳು, ಸಂಸಾರ, ಇವೆಲ್ಲವನ್ನೂ ತ್ಯಜಿಸಿ, ಕೃಷ್ಣನ ಧ್ಯಾನಕ್ಕೇ ತಮ್ಮ ಇಡೀ ಬದುಕನ್ನು ಮುಡಿಪಾಗಿಟ್ಟ ಆಂಡಾಳ್ ಮತ್ತು ಮೀರಾಬಾಯಿ ಸರಿ ಸುಮಾರು ಎಲ್ಲಾ ಭಾರತೀಯರಿಗೂ ಗೊತ್ತು; ಇಂದಿಗೂ ಅವರ ಅದ್ಭುತ ರಚನೆಗಳನ್ನು ಹಾಡಿ/ಕೇಳಿ ಪರವಶರಾಗುವವರು ಅನೇಕಾನೇಕ ಗಾಯಕರು ಹಾಗೂ ಸಂಗೀತಾಭಿಮಾನಿಗಳು. ಆದರೆ, ಇವರ ಸಾಲಿನಲ್ಲಿಯೇ ಬರುವ, 'ಮುಸ್ಲಿಮ್ ಮೀರಾಬಾಯಿ' ಎಂದೇ ಕರೆಯಿಸಿಕೊಳ್ಳುತ್ತಿದ್ದ, ತಾಜ್ ಬೀಬಿ (1600–1650) ಎಂಬ ಮುಸ್ಲಿಮ್ ಸಂತ ಕವಿ ಹೆಚ್ಚಿನವರಿಗೆ ಗೊತ್ತಿಲ್ಲ.

ರಾಜಾಸ್ಥಾನದ ಫತೇಪುರಿಯಲ್ಲಿದ್ದ ಕಾಯಮ್‌ಖಾನಿ ವಂಶದ ಫದನ್ ಖಾನ್ ಎಂಬುವವನ ಮಗಳು ತಾಜ್ ಬೀಬಿ. ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆಯೇ ಅವಳ ಸೌಂದರ್ಯಕ್ಕೆ ಮನಸೋತ ಬಾದ್‌ಷಾ ಅಕ್ಬರ್ ಅವಳನ್ನು ಮದುವೆಯಾದನು. ದೆಹಲಿಗೆ ಬಂದ ನಂತರ ತಾಜ್ ಬೀಬಿಗೆ ಸಮಾನ ವಯಸ್ಕರಾದ ಬೀರ್‌ಬಲ್ ಮಗಳು ಶೋಭಾವತಿ ಮತ್ತು ಜಯಮಲ್ ಮಗಳು ಲೀಲಾವತಿ ಇವರೊಡನೆ ಸ್ನೇಹ ಬೆಳೆಯಿತು. ಗೆಳತಿಯರಿಬ್ಬರೂ ಕೃಷ್ಣಭಕ್ತರಾದುದರಿಂದ, ಅವರು ತಾಜ್‌ಳನ್ನು ಭೇಟಿಯಾದಾಗಲೆಲ್ಲಾ ಕೃಷ್ಣನ, ಕೃಷ್ಣ–ರಾಧೆಯರ, ಹಾಗೂ ಬೃಂದಾವನದನ ಗುಣಗಾನ ಮಾಡುತ್ತಿದ್ದರು; ಈ ಕಾರಣದಿಂದ ತಾಜ್ ಬೀಬಿಗೂ ಕೃಷ್ಣನ ಬಗ್ಗೆ ಅಪಾರ ಆಸಕ್ತಿ ಮೂಡಿತು. ಒಮ್ಮೆ, ಪತಿಯ ಒಪ್ಪಿಗೆಯನ್ನು ಪಡೆದು ಗೆಳತಿಯರೊಡನೆ ತಾಜ್ ಗೋವರ್ಧನಕ್ಕೆ ಹೋಗಿ, ಅಲ್ಲಿದ್ದ, ಶೋಭಾವತಿ–ಲೀಲಾವತಿ ಇವರ ಗುರುಗಳಾಗಿದ್ದ (ವಲ್ಲಭಾಚಾರ್ಯರ ಪುತ್ರ) ಗೋಸ್ವಾಮಿ ವಿಠಲನಾಥ ಜಿ ಅವರನ್ನು ಭೇಟಿ ಮಾಡಿ, ನಂತರ ಅವರ ಸತ್ಸಂಗಗಳಲ್ಲಿ ಭಾಗಿಯಾಗಿ, ಕೆಲದಿನಗಳನ್ನು ಕಳೆದಳು. ಆದರೆ, ಅಕ್ಬರ್ ಹಿಂತಿರುಗುವಂತೆ ಆಜ್ಞೆ ಮಾಡಿದುದರಿಂದ ಒಲ್ಲದ ಮನಸ್ಸಿನಿಂದ ದೆಹಲಿಗೆ ಮರಳಿದಳು. ಬರುವಾಗ ಕೃಷ್ಣನ ಸುಂದರ ಚಿತ್ರವನ್ನು ತನ್ನೊಡನೆ ತಂದಿದ್ದಳು; ಅದನ್ನು ನೋಡುತ್ತಾ, ಅದಕ್ಕೆ ದಿನವೂ ಹೂಹಾರವನ್ನು ಹಾಕುತ್ತಾ, ಕೃಷ್ಣ